**OS No. 72/2023**
**ಪಿ.ಡಬ್ಲ್ಯೂ: 1**

**ದಿನಾಂಕ: 06-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ ಎಸ್. ಎಮ್. ವಕೀಲರಿಂದಃ</u>**

**1.** ಸದರಿ ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯ ವಿಸ್ತೀರ್ಣ ಮತ್ತು ಸೀಮೆ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**2.** ದಾವಾ ಆಸ್ತಿಯು ಜಮೀನ ಸರ್ವೆ ನಂಬರ **398, 399** ಮತ್ತು **400** ರಲ್ಲಿ ಬರುತ್ತದೆ ಎಂದು ತೋರಿಸಲು ನಾನು ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ನಾನು ದಾವಾ ಆಸ್ತಿಯ ಸಲುವಾಗಿ ಮುನ್ಸಿಪಲ್ಟಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಜಮೀನ ಸರ್ವೆ ನಂಬರ **398, 399, 400** ರಲ್ಲಿ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ **398, 399, 400** ಇದು ಎನ್.ಎ ಆಗಿಲ್ಲ ಎಂದರೆ ಸದರಿ ದಾವಾ ಆಸ್ತಿಯು ಇರುವಾಗ ಯಾವುದೇ ಕಾಯಿದೆ ಇರುವುದಿಲ್ಲ ಆದ್ದರಿಂದ ಎನ್.ಎ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಎನ್.ಎ ಆಗದೇ ಇರುವ ಕಾರಣ ಪ್ಲಾಟ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ **398, 399, 400** ರಲ್ಲಿ ಯಾವುದೇ ಪ್ಲಾಟ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**3.** ಸದರಿ ದಾವಾ ಹೂಡುವ ದಿನಾಂಕದಂದು ನಾನು ಮಾಲಿಕ ಮತ್ತು ಕಬ್ಜೆದಾರ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ **398, 399, 400** ಇದು ನಿಜಾಮ ಸರಕಾರದವರು ಇಂಡಸ್ಟ್ರೀಯಲ್ ಕೆಲಸಕ್ಕಾಗಿ

ಪಡೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜಾಮ ಸರಕಾರದವರು  ಜಮೀನ ಸರ್ವೆ ನಂಬರ **398, 399, 400** ಪಡೆದುಕೊಂಡಿದ್ದರು ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾದಲ್ಲಿ ಸಲ್ಲಿಸಿರುತ್ತೇನೆ. ನಾನು ಯಾವುದೇ ದಾಖಲಾತಿಯನ್ನು ಸಲ್ಲಿಸದೇ ಇದ್ದರೂ ಕೂಡ ಮತ್ತು ನಿಜಾಮ ಸರಕಾರದಲ್ಲಿ ಯಾವುದೇ ದಾಖಲಾತಿ ಇಲ್ಲದೇ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ **398, 399, 400** ರಲ್ಲಿ ಇಂಡಸ್ಟ್ರೀಯಲ್ ಪ್ಲಾಟ ನಂಬರ **1** ನಮೂದು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ಲಾಟ ನಂಬರ **1** ನಿಜಾಮ ಸರಕಾರದವರು ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಜಾಮ ಸರಕಾರದವರು ಮುಸ್ಲೀಂ ಇಂಡಸ್ಟ್ರೀಯಲ್ ಇವರಿಗೆ ಕೊಟ್ಟಿದ್ದರ ಬಗ್ಗೆ ದಾಖಲಾತಿಗಳನ್ನು ನಾನು ಹಾಜರುಪಡಿಸಿರುತ್ತೇನೆ. ಸದರಿ ಮುಸ್ಲೀಂ ಇಂಡಸ್ಟ್ರೀಯಲ್ ಈತನಿಗೆ ನೀಡಿದ್ದರ ಬಗ್ಗೆ ದಾಖಲಾತಿ ಇರುತ್ತದೆ. ಸದರಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸದರಿ ನಿಜಾಮ ಸರಕಾರಕ್ಕೆ ಇದು ಇಂಡಸ್ಟ್ರೀಯಲ್ ಸಲುವಾಗಿ ನೀಡಿದ್ದರು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ? ಎಂದರೆ ಸಾಕ್ಷಿಯು ತೀರ್ಪಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ನಿಜಾಮ ಸರಕಾರ ತೆಗೆದುಕೊಂಡಿದ್ದರ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**4.** ಸದರಿ ಮೊಮ್ಮಡನ ಈತನು ಭಾರ ಬಿಟ್ಟು ಪಾಕಿಸ್ತಾನಕ್ಕೆ ಹೋಗಿದ್ದರ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಸದರಿ  ಮೊಮ್ಮಡನ ಈತನು ಪಾಕಿಸ್ತಾನಕ್ಕೆ ಹೋದ ನಂತರ ಒಕ್ಕೂಟ ಸರಕಾರ ಜಮೀನು ಸರ್ವೆ ನಂಬರ **398, 399, 400** ನ್ನು ಪಡೆದುಕೊಂಡಿದ್ದರ ಬಗ್ಗೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ಜಮೀನು ಸರ್ವೆ ನಂಬರ **398, 399, 400** ಗೆ ಒಕ್ಕೂಟ ಸರಕಾರ ಮಾಲೀಕರು ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ  ಜಮೀನು ಸರ್ವೆ ನಂಬರ **398, 399, 400** ಗೆ ಒಕ್ಕೂಟ ಸರಕಾರ ಮಾಲೀಕ ಮತ್ತು ಕಬ್ಜೆದಾರ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಯಾವುದೇ ಆಧಾರ ಇಲ್ಲದೆ ಒಕ್ಕೂಟ ಸರಕಾರ

ಮಾಲೀಕ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಕ್ಕೂಟ ಸರಕಾರದವರು ಸಿಂಧಿ ರವಿಶಂಕರ ಇವರಿಗೆ ಜಮೀನು ನೀಡಿದ್ದರ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಸಿಂಧಿ ರವಿಶಂಕರ ಈತನಿಗೆ ಪ್ಲಾಟ ಮಂಜೂರು ಮಾಡಿದ್ದರ ಬಗ್ಗೆ ಯಾವ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ? ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಮಂಜೂರು ಮಾಡಿದ ನಂತರ ಸಿಂಧಿ ರವಿಶಂಕರ ಈತನು ಮಾಲೀಕ ಮತ್ತು ಕಬ್ಜೆದಾರ ಇರುತ್ತಾನೆ ಎಂದು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಸಿಂಧಿ ರವಿಶಂಕರ ಈತನು ಮಾಲೀಕ ಇಲ್ಲದೆ ಪ್ಲಾಟನ್ನು ಅಕ್ಕನಾಗಮ್ಮ ಇವಳಿಗೆ ಮಾರಾಟ ಮಾಡಿರುತ್ತಾನೆ ಎಂದು ಸುಳ್ಳು ಇರುತ್ತದೆ ಎಂದರೆ ಸಾಕ್ಷಿಯು ನೊಂದಣಿ ದಾಖಲಾತಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಿಂಧಿ ರವಿಶಂಕರ ಮಾಲೀಕ ಇರುವುದರ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಸಿಂಧಿ ರವಿಶಂಕರ ಮಾಲೀಕ ಇಲ್ಲದೆ ಅಕ್ಕನಾಗಮ್ಮ ಇವಳಿಗೆ ಮಾರಾಟ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ನೊಂದಣಿ ಖರೀದಿ ಪತ್ರದಿಂದ ಅಕ್ಕನಾಗಮ್ಮ ಮಾಲೀಕ ಇರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಂಧಿ ರವಿಶಂಕರ ಇವನ ಹೆಸರಿನಲ್ಲಿ ದಾವಾ ಆಸ್ತಿ ಇರುವುದರ ಬಗ್ಗೆ ಮುನ್ಸಿಪಾಲಿಟಿಯಲ್ಲಿ ನಮೂದು ಆಗಿದ್ದರ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ? ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮುನ್ಸಿಪಾಲಿಟಿಯಲ್ಲಿ ಮೊಮ್ಮಡನ್ ಇವರ ಹೆಸರಿನಲ್ಲಿ ಇರುವ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

5. ಸದರಿ ಅಕ್ಕನಾಗಮ್ಮ ಇವರು ಅನ್ನಪೂರ್ಣ ಇವರಿಗೆ ಮೃತ್ಯು ಪತ್ರ ಮಾಡಿರುವುದನ್ನು ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಅಕ್ಕನಾಗಮ್ಮ ಇವಳು ನೀಡಿದ ಮೃತ್ಯು ಪತ್ರ ಸಿವಿಲ್ ನ್ಯಾಯಾಲಯದಲ್ಲಿ ರುಜುವಾತುಪಡಿಸಿರುತ್ತೇವೆ. ಸದರಿ ಅಸಲು ದಾವಾ ನಂಬರ ನನ್ನ ನ್ಯಾಯವಾದಿಗೆ ಮಾಹಿತಿ ಇರುತ್ತದೆ. ಸದರಿ ಮೃತ್ಯು ಪತ್ರ ಸಿವಿಲ್ ನ್ಯಾಯಾಲಯದಲ್ಲಿ ರುಜುವಾತುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರಕ್ಕೆ ಯಾವುದೇ ಬೆಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರದ ಪ್ರಕಾರ

ಅನ್ನಪೂರ್ಣಮ್ಮ ಇವರು ಮಾಲೀಕ ಮತ್ತು ಕಬ್ಜೆದಾರರು ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅನ್ನಪೂರ್ಣಮ್ಮ ಇವರ ಹೆಸರಿನಲ್ಲಿ ಮುನ್ಸಿಪಾಲಿಟಿಯಲ್ಲಿ ನಮೂದು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಕ್ಕನಾಗಮ್ಮ ಇವರ ಹೆಸರಿನಲ್ಲಿ ಮುನ್ಸಿಪಾಲಿಟಿಯಲ್ಲಿ ದಾವಾ ಆಸ್ತಿಯು ನಮೂದು ಆಗಿರುವುದರ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಅನ್ನಪೂರ್ಣಮ್ಮ ಕಂದಾಯ ನೀಡಿದ್ದರ ಬಗ್ಗೆ ಕಂದಾಯ ಪಾವತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಮೃತ್ಯು ಪತ್ರ ರುಜುವಾತುಪಡಿಸದೇ ಇತರ ದಾಖಲಾತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

6. ಸದರಿ ಅನ್ನಪೂರ್ಣಮ್ಮ ನನ್ನ ಹೆಸರಿಗೆ ದಾನ ಪತ್ರ ಮಾಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅನ್ನಪೂರ್ಣಮ್ಮ ದಾನ ಪತ್ರ ಮಾಡಲು ಮಾಲೀಕಳು ಮತ್ತು ಕಬ್ಜೆದಾರಳು ಇರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಅವಳಿಗೆ ದಾನಪತ್ರ ಮಾಡಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ಕ್ಕೆ ಪ್ರತಿವಾದಿಯರು ಮಾಲೀಕರು ಮತ್ತು ಕಬ್ಜೆದಾರರು ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ 400 ಇದು ಹಿರಿಯರ ಆಸ್ತಿ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ಇದು ಮೊದಲು ಹಣಮಂತ ತಂದೆ ಭೀಮಣ್ಣ ಕುರಬರ ಇವರು ಮಾಲೀಕರು ಇದ್ದರು ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ಇದು ಕಾಸರಾ ಪಹಣಿಯಿಂದ ಹಣಮಂತ ತಂದೆ ಭೀಮಣ್ಣ ಮತ್ತು ಅವರ ಮಕ್ಕಳಾದ ಶಂಕರಪ್ಪ ಮತ್ತು ನಾಗಪ್ಪ ಇವರ ಹೆಸರಿನಲ್ಲಿ ಮತ್ತು ಪ್ರತಿವಾದಿಯ ಹೆಸರಿನಲ್ಲಿ ಇಲ್ಲಿಯವರೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ 400 ಕ್ಕೆ ಪ್ರತಿವಾದಿಯರು ಯಾವುದೇ ಸಂಬಂಧವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರು ನನ್ನ ದಾವಾ ಆಸ್ತಿಗೆ ಹಸ್ತಕ್ಷೇಪ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ರಲ್ಲಿ ಪ್ರತಿವಾದಿಯರೇ ಮಾಲೀಕರು ಮತ್ತು ಕಬ್ಜೆದಾರರು ಇರುತ್ತಾರೆ

ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 400 ಕ್ಕೆ ಈಗ ಹೊಸದಾಗಿ ಜಮೀನ ಸರ್ವೆ ನಂಬರ 400/1 ಮತ್ತು 400/2 ನಂಬರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನನ್ನ ದಾವಾ ಆಸ್ತಿಯ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನ ಸರ್ವೆ ನಂಬರ 400 ರಲ್ಲಿ ಸಾಗುವಳಿ ಮಾಡುತ್ತಾ ಇದ್ದರೂ ಕೂಡ ನನ್ನ ದಾವಾ ಆಸ್ತಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ದಾವಾ ಆಸ್ತಿಗೆ ಯಾವತ್ತೂ ಹಸ್ತಕ್ಷೇಪ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 12/93 ರ ದಾವೆಯಲ್ಲಿ ಪ್ರತಿವಾದಿಯರು ಪಕ್ಷಗಾರರು ಇರುವುದಿಲ್ಲ ಎಂದರೆ ಸರಿ. ಸದರಿ ಅಸಲು ದಾವಾ ನಂಬರ 12/93 ರಲ್ಲಿ ಜಮೀನ ಸರ್ವೆ ನಂಬರ 400 ದಾವಾ ಆಸ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ 400 ಇದ್ದಾಗ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡದೇ ನ್ಯಾಯಾಲಯದಿಂದ ಸುಳ್ಳು ಮಾಹಿತಿ ನೀಡಿ ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಡಿಕ್ರಿ ಪಡೆಯಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

7. ಜಮೀನ ಸರ್ವೆ ನಂಬರ 400 ಕ್ಕೆ ಕೀರಲಿಂಗ ಮತ್ತು ಬಸವರಾಜ ಸಂಬಂಧವಿರುವುದಿಲ್ಲ ಎಂದರೆ ಸರಿ. ಸದರಿ ಜಮೀನ ಸರ್ವೆ ನಂಬರ 400 ಮೇಲೆ ಕೀರ ಲಿಂಗ ಮತ್ತು ಬಸವರಾಜ ಇವರ ವಿರುದ್ದ ದಾವೆ ಸಲ್ಲಿಸಿ ಸುಳ್ಳು ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಸರಕಾರದ ವಿರುದ್ದ ದಾವೆ ಸಲ್ಲಿಸಿ ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಸರಕಾರದ ವಿರುದ್ದ ಸಲ್ಲಿಸಿದ ದಾವೆಯಲ್ಲಿ ಜಮೀನ ಸರ್ವೆ ನಂಬರ 400 ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸರಕಾರದ ವಿರುದ್ದ ಸಲ್ಲಿಸಿದ ದಾವೆ ಡಿಕ್ರಿ ಪಡೆದಿದ್ದು ಸದರಿ ಹಣಮಂತ ಮತ್ತು ಅವರ ಕಟುಂಬದ ವಿರುದ್ದ ಯಾವುದೇ ಅಧಿಕಾರ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಡಿಕ್ರಿಗಳ ಪ್ರಕಾರ ನಾವು ದಾವಾ ಆಸ್ತಿಯ ಮಾಲೀಕ ಮತ್ತು ಕಬ್ಜೆದಾರ ಇರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಡಿಕ್ರಿಗಳು ನಾವು ಸುಳ್ಳುಮಾಹಿತಿ ನೀಡಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

8. ಸದರಿ ದಾವಾ ಆಸ್ತಿ ವಿಸ್ತೀರ್ಣ ಮತ್ತು ಸೀಮೆಗಳು ಅಸ್ತಿತ್ವದಲ್ಲಿ ಇಲ್ಲದೆ ಇರುವ ಕಾರಣ ನಾವು ಮಾಲೀಕರು ಮತ್ತು ಕಬ್ಜೆದಾರರು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಈ ದಾವೆಯಲ್ಲಿ ಯಾವುದೇ ಪರಿಹಾರ ಪಡೆದುಕೊಳ್ಳಲು ಅರ್ಹನಲ್ಲ ಎಂದರೆ ಸರಿಯಲ್ಲ. ಸದರಿ ಈ ದಾವೆಯಲ್ಲಿ ಮಾಲೀಕತ್ವದ ಬಗ್ಗೆ ಪರಿಹಾರ ಕೇಳದೇ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ 400 ಕ್ಕೆ ಪ್ರತಿವಾದಿಯರು ಕಬ್ಜೆಯಿಂದ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯರು ಕಬ್ಜೆಯಲ್ಲಿಯೇ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ಲಾಟ ನಂಬರ 1 ಇದು ಜಮೀನ ಸರ್ವೆ ನಂಬರ 400 ರಲ್ಲಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂಬರ 400 ರಲ್ಲಿ ಇಂಡಸ್ಟ್ರೀಯಲ್ ಪ್ಲಾಟ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ದಾವಾ ಸಲ್ಲಿಸುವ ಮೊದಲು ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಪ್ರಕರಣ ನಡೆದಿತ್ತು ಎಂದರೆ ಸಾಕ್ಷಿಯು ಮುಗಿದಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಬರ 1 ರವರು ಇಂಡಸ್ಟ್ರೀಯಲ್ ಪ್ಲಾಟ ತೆಗೆದು ಹಾಕಿ ಎಂದು ಜಿಲ್ಲಾಧಿಕಾರಿ ಇವರಿಗೆ ಅರ್ಜಿಯನ್ನು ನೀಡಿದ್ದರು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ವಿರುದ್ದ ನಾನು ಮತ್ತು ನನ್ನ ತಾಯಿ ಹೈಕೋರ್ಟಿಗೆ ರಿಟ್ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ರಿಟ್ ಅರ್ಜಿಯಲ್ಲಿ ಮತ್ತೊಮ್ಮೆ ಪರಿಶೀಲನೆ ಮಾಡಿ ಎಂದು ಡಿ.ಸಿ ಆಫೀಸ್ ಗೆ ನಿರ್ದೇಶನ ನೀಡಿರುತ್ತಾರೆ ಎಂದರೆ ಸರಿ. ಸದರಿ ಡಿ.ಸಿ ಮರು ಪರಿಶೀಲನೆ ಮಾಡಿದಾಗ ನಮಗೆ ಯಾವುದೇ ದಾವಾ ಆಸ್ತಿಗೆ ಸಂಬಂಧವಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಿಜ ಸಂಗತಿ ಹೊರ ಬರುತ್ತದೆ ಎಂಬ ಕಾರಣಕ್ಕಾಗಿ ಡಿ.ಸಿ ಆರ್ಡರ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರು ಸುಳ್ಳು ದಾವಾ ಸಲ್ಲಿಸಿದ್ದರಿಂದ ನಾನು 25,000/- ರೂ. ಭಾದ್ಯಸ್ಥರು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**